

## ಪುದುಚೇರಿಯಲ್ಲಿ ಯಕ್ಷಗಾನ ಕಂಪು

ಪುದುಚೇರಿಯ ಇಂಡಿಯನ್ ಆರ್ಟ್ ಆ್ಯಂಡ್ ಕ್ರಾಫ್ಟ್ ವಿಲೇಜ್ ಪ್ರವಾಸಿಗರು ನೋಡತಕ್ಕ ಸ್ಥಳ. ಅಲ್ಲಿಯ ಹೊರಾಂಗಣದ ತೆರೆದ ಹುಲ್ಲುಹಾಸಿನಲ್ಲಿ ಹಲವಾರು ಮಣ್ಣಿನ ಮೂರ್ತಿಗಳನ್ನು ರಚಿಸಿ ಇಟ್ಟಿದ್ದಾರೆ. ಮಣ್ಣಿನಿಂದ ರಚಿಸಿದ ಈ ಶಿಲ್ಪಗಳು ನಿರ್ಮಾಣದ ಹಂತದಲ್ಲಿ ಹದವಾಗಿ ಬೆಂಕಿಯಲ್ಲಿ ಬೆಂದು ಹೆಂಚಿನ ಬಣ್ಣಕ್ಕೆ ತಿರುಗಿವೆ. ಕುದುರೆ, ಆನೆ, ದೇವತೆಯರು, ಗೂಡೊಳಗಿನ ಹಕ್ಕಿಗಳು, ಜಾನಪದ ಜಗತ್ತಿನ ಕಾಲ್ಪನಿಕ ದೇವಾನು ದೇವತೆಯರು.... ಹೀಗೆ ಸುತ್ತಲೂ ಸಾಲಾಗಿ ಇರಿಸಿದ ಶಿಲ್ಪಗಳ ಮಧ್ಯೆ ನಮ್ಮ ನಾಡಿನ ಯಕ್ಷಗಾನ ಶಿಲ್ಪವೂ ಗಮನ ಸೆಳೆಯುತ್ತದೆ. ನಮ್ಮ ನೆಲದ ಯಕ್ಷಗಾನದ ಕಂಪು ಪುದುಚೇರಿಗೂ ಹಬ್ಬಿದ ಪರಿಯ ಕಂಡು ಹೆಮ್ಮೆಯೆನಿಸಿತು. ಅತಿ ಸಂತಸದ ಸಂಗತಿಯೆಂದರೆ ಈ ಶಿಲ್ಪಗಳನ್ನು ನಿರ್ಮಿಸಿದ ಕಲಾವಿದ ಕೆ. ಗುಬೇಂದಿರನ್ ಮಾತಿಗೆ ಸಿಕ್ಕಿದ್ದು. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಕಲಾಶಿಕ್ಷಣ ಮುಗಿಸಿದ ಅವರೀಗ ಅಲ್ಲಿನ ಕಲಾಕ್ಷೇತ್ರದ ಉಸ್ತುವಾರಿ ಹೊತ್ತಿದ್ದಾರೆ. ಚಿತ್ರದಲ್ಲಿ ಕಾಣುವಂತೆ ಸುನಾಮಿಯ ಭೀಕರತೆಯ ಪ್ರತೀಕವಾದ ಶಿಲ್ಪಕಲಾ ಕೃತಿಯೊಂದರಲ್ಲಿ ಅವರು ತೊಡಗಿಸಿಕೊಂಡಿದ್ದರು.

–ಧರ್ಮಾನಂದ ಶಿರ್ವ, ಬೆಂಗಳೂರು



## ಮಿತಬಳಕೆಗೆ ‘ಶಂಖತೀರ್ಥ’



ಪುದುಚೇರಿಯ ವೈಟ್‌ಟೌನ್‌ನಲ್ಲಿನ ಭಾರತಿ ಪಾರ್ಕ್‌ನಲ್ಲಿ ದೊಡ್ಡ ಶಂಖವೊಂದು ಕಣ್ಣಿಗೆ ಬಿತ್ತು. ಇದೇನು... ಉದ್ಯಾನದಲ್ಲಿ ಶಂಖದ ಕಲಾಕೃತಿ ಇಟ್ಟಿದ್ದಾರೆಂದು ಹತ್ತಿರ ಹೋದೆ. ಶಂಖದ ಕಲಾಕೃತಿಗೆ ಎರಡು ಸಣ್ಣ ಕೊಳಾಯಿಗಳನ್ನು ಜೋಡಿಸಿ ಅದರಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿತ್ತು. ಅದರ ಮೇಲೆ, ‘ಶಂಖತೀರ್ಥ ಅತ್ಯಮೂಲ್ಯವಾದದ್ದು, ಅದನ್ನು ಮಿತವಾಗಿ ಬಳಸಬೇಕು’ ಅನ್ನುವಂತೆ ‘ನೀರೂ ಅತ್ಯಮೂಲ್ಯವಾದದ್ದು, ಅದನ್ನೂ ಮಿತವಾಗಿ ಬಳಸಬೇಕು’ ಎಂದು ಬರೆಸಲಾಗಿತ್ತು. ಅದನ್ನು ನೋಡಿ, ನೀರು ಸಂರಕ್ಷಣೆಗೆ ಶಂಖದಿಂದ ಬಂದರೇನೇ ತೀರ್ಥ ಎಂಬ ಮಾತು ನೆನಪಿಗೆ ಬಂತು. ತೀರ್ಥದಂತೆ ನೀರನ್ನು ಪವಿತ್ರ ಎಂದು ಭಾವಿಸಲು ಮತ್ತು ಮಿತವಾಗಿ ಬಳಸಲು ಶಂಖಾಕೃತಿಯಲ್ಲಿ ನೀರಿನ ಟ್ಯಾಂಕ್ ನಿರ್ಮಿಸಲಾಗಿದೆ.

–ಶಾಲಿನಿ ನಾಯಕ್, ಬೆಂಗಳೂರು



## ಪುರಾತನ ಅಸ್ಮಿತೆಗೆ ಸ್ಥಳಾಂತರ

‘ಹುಟ್ಟಿದವನಿಗೆ ಸಾವು ಖಚಿತ. ಮೆರೆದವನು ಮಣ್ಣಾಗುವುದೂ ಖಚಿತ’ ಎನ್ನುವುದಕ್ಕೆ ಸಾಕ್ಷಿ ಹಂಪಿ. ವಿಜಯನಗರ ಸಾಮ್ರಾಜ್ಯದ ವೈಭವವು ಇತಿಹಾಸ ಪುಟ ಸೇರಿದಂತೆ ಅಲ್ಲಿನ ಅವಶೇಷಗಳಲ್ಲೆ ಬ್ಯಾಂಕ್ ಚಟುವಟಿಕೆ ನಡೆಸುತ್ತಿದ್ದ ಕಟ್ಟಡವೊಂದು ಇತಿಹಾಸ ಪುಟ ಸೇರಿದೆ. ಇಲ್ಲಿನ ವಿರೂಪಾಕ್ಷೇಶ್ವರ ದೇಗುಲದಿಂದ ಮಾತಂಗ ಬೆಟ್ಟದವರೆಗೆ ಇರುವ ರಾಜಬೀದಿಯ ಕಲ್ಲಿನ ಕಟ್ಟಡದಲ್ಲಿ ಬ್ಯಾಂಕೊಂದು ಸುಮಾರು ಮೂರ್ನಾಲ್ಕು ದಶಕಗಳ ಕಾಲ ಕಾರ್ಯನಿರ್ವಹಿಸಿತ್ತು. ಈ ಬ್ಯಾಂಕ್ ಸ್ಥಳೀಯರಿಗಲ್ಲದೆ ವಿದೇಶಿ ಪ್ರವಾಸಿಗರಿಗೂ ನೆರವಾಗಿತ್ತು. ಈ ಕಟ್ಟಡವೀಗ ಆಧುನಿಕ ಸ್ಮಾರಕದಂತಾಗಿದೆ. ವಿಜಯನಗರ ಕಾಲದಲ್ಲಿ ನಿರ್ಮಿತವಾದ ಮಂಟಪಕ್ಕೆ ಗೋಡೆ ಕಟ್ಟಿಕೊಂಡು ಅದನ್ನು ಬ್ಯಾಂಕ್ ಆಗಿ ಪರಿವರ್ತಿಸಲಾಗಿತ್ತು.

ಹಂಪಿಯ ಸ್ಮಾರಕಗಳು ಹೇಗಿವೆಯೋ... ಹಾಗೆಯೇ ಉಳಿಸಿಕೊಳ್ಳಲು ಭಾರತೀಯ ಪುರಾತತ್ವ ಇಲಾಖೆಯು ಹಂಪಿಯ ಪುರಾತನ ಮಂಟಪಗಳಲ್ಲಿ ವಾಣಿಜ್ಯ ಚಟುವಟಿಕೆ ಮಾಡುತ್ತಿದ್ದವರನ್ನು, ವಾಸಿಸುತ್ತಿದ್ದವರನ್ನು ಅಲ್ಲಿಂದ ಖಾಲಿ ಮಾಡಿಸಿ, ಅವರಿಗೆಲ್ಲ ಕಡ್ಡಿರಾಂಪುರದಲ್ಲಿ ಜಾಗ ನೀಡಲಾಗಿದೆ. ಹಾಗೆಯೇ ಬ್ಯಾಂಕಿನ ಶಾಖೆಯನ್ನೂ ಕಡ್ಡಿರಾಂಪುರಕ್ಕೆ ಸ್ಥಳಾಂತರಿಸಲಾಗಿದೆ.

–ಅನುರಾಧ ಟಿ., ದಾವಣಗೆರೆ